Kannad (P) (7)

(2) ~~23~~3206

ವಂದೇಮಾತರಂ.

ಭಾರತ ದೇಶದಲ್ಲಿ
ಉತ್ತಮದರ್ಜೆಗೆ ಸೇರಿದ
ಬೀಡಿಗಳೆಂದರೆ

# "ಕಾಂಗ್ರೆಸ್"

(ಟ್ರೇಡ್ ಮಾರ್ಕ್)

ಇದು

ಭಾರತದೇಶದ ಎಲ್ಲಾ ಕಡೆಗಳಲ್ಲಿಯೂ
ದೊರೆಯುತ್ತದೆ.

ತಮಗೆ ಬೀಡಿಗಳು ಬೇಕಾಗಿದ್ದಲ್ಲಿ

## "ಕಾಂಗ್ರೆಸ್"

ಟ್ರೇಡ್ ಮಾರ್ಕ್

ಎಂಬ ಹೆಸರುಳ್ಳದ್ದನ್ನೇ ನೋಡಿ
ತೆಗೆದುಕೊಳ್ಳಿರಿ.

TRADE MARK CONGRESS REGISTERED

ಮಾಲೀಕರು:—
M.R.C. ಬಸಪ್ಪ ಅಂಡ್ ಸ‍ನ್ಸ್.

ಪತ್ರ ವ್ಯವಹಾರ:—
ಜ್ಯೂಬಿಲಿ ಸ್ಟೋರ್ಸ್,
ಮೈಸೂರು.

NATIONAL ARCHIVES LIBRARY
No 3206
Date 3.4.72
GOVT. OF INDIA

Mysore Congress — in Kannada. Mysore
by N. Vishkantha Rao,
Santhepet, Mysore
320
Kanna
IMPERIAL RECORD DEPARTMENT
Regr. No. ......
7 OCT. 1941

ಗುರುತುಕನ್ ಪ್ರಖ್ಯಾತ

# ಮೈಸೂರು ಕಾಂಗ್ರೆಸ್ ಇತಿಹಾಸ

## ಲಾವಣಿ ಪ್ರಬಂಧ



ಲೇಖಕ ಮತ್ತು ಪ್ರಕಾಶಕ

ತುರಾಃ ಬಿರುದಾರ್ ಬಿ. ನೀಲಕಂಠಯ್ಯನವರ ಶಿಷ್ಯ ಎನ್. ವಿಷಕಂಠರಾವ್

ಸಂತೇಪೇಟೆ, ಮೈಸೂರು.

(1941)

ಬೆಲೆ ೦—೧—೦

# ಮೈಸೂರು ಕಾಂಗ್ರೆಸ್ ಇತಿಹಾಸ

—:o:—

( ಧಾಟಿ:—ಕಡಿಚಾಲ್)

ವಂದೇ ಮಾತರಂಯೆಂದು ಸಾರುತಿಹ ಗಾಂಧಿ ಮಹಾತ್ಮರ ತತ್ವವನು ।
ಹಿಂದೂಮುಸಲ್ಮಾನ್ ಬಂಧು ಭಗಿನಿಯರಿಗೊಂದಿಸಿಪೇಳುವೆ ಸಭೆಲಿದನು ॥

॥ ಪಲ್ಲವಿ ॥

ಮೈಸೂರ್ ದೇಶದ ಪೂರ್ವೇತಿಹಾಸವ ವರ್ಣನೆ ಮಾಡಲು ಸಭೆಯಲ್ಲಿ ।
ಸಾಸಿರಜಿಹ್ವೆಯ ಆದಿಶೇಷನಿಗು ಅಸಾಧ್ಯವೆನಿಸಿದೆ ಪ್ರಕೃತದಲಿ ॥
ವ್ಯಾಸಶುಕಾದಿಗಳಿದ್ದು ಸ್ವೇಚ್ಛೆಯಲಿ ತಪವನು ಮಾಡಿದ ಕ್ಷೇತ್ರದಲಿ ।
ಅಸಾಧ್ಯಪಿಂಡಗಳೆನಿಸಿದ ಆಂಗ್ಲರ ದಾಸ್ಯದಒಡೆತನವಾಯ್ತಿರಲಿ ॥
ಕೌಸಲ್ಯಾತ್ಮಜ ಅಜ್ಞಾತವಾಸದಿ ಸಂಚರಿಸಿದ ಪುಣ್ಯಭೂಮಿಯಲಿ ।
ಮೋಸದಆಳಿಕೆ ವಾಸವಾಗಿರುವುದು ದಾಸ್ಯದ ನೊಗವನು ಹೊರಿಸುತಲಿ ॥

॥ ಚಾಲುದರ್ಾ ॥

ಕೌರವಕುಲಸಂಹಾರಕ ಪಾಂಡವರಾಶೀರ್ವಾದ ಪ್ರದೇಶದಲಿ ।
ಪಾರತಂತ್ರ್ಯನಿಜ ದಳ್ಳುರಿಜ್ವಲಿಸಿದೆ ಗೋಮುಖವ್ಯಾಘ್ರರ ಸಲಹೆಯಲಿ ॥
ಶ್ರೀರಾಮಾನುಜ ಶಂಕರಾರ್ಯ ಹರಿಕಿಂಕರರುದಿಸಿದ ತಾಣದಲಿ ।
ದರಿದ್ರದೇವತೆ ನಾಟ್ಯವಾಗುತಿದೆ ದುರಾಸೆದೂತರ ತಂತ್ರದಲಿ ॥

॥ ಶ್ಲೋಕ ॥

ಶೈವಶರಣರು ಬಸವರೇಣುಕ ಬೋಧೆಗೈದಪ್ರದೇಶದಿ ।
ಜೀವಶ್ರವಗಳ ನಿತ್ಯದರ್ಶನ ವಾಗುತಿರುವುದುಮೋಪದಿ ॥

॥ ದೊಡ್ಡುದರ್ಾ ॥

ಚಾಲುಕ್ಯರು ಗಂಗರಸ ಕದಂಬರು ಆಳಿದ ಸ್ವಾತಂತ್ರ್ಯರಾಷ್ಟ್ರದಲಿ ।
ಗುಲಾಮಗಿರಿಯಲಿ ಸಲಾಮುಹೊಡೆಯುವಲಲಾಮತನವಾಯಿತು ಕುಶಲಿ ॥

# ಸಮರ್ಪಣಾ

ಮೈಸೂರು ಕಾಂಗ್ರೆಸ್ ಇತಿಹಾಸವೆಂಬ ನಾಮಾಂಕಿತದಿಂದ ಜನಿಸಿರುವ ಈ ಲಾವಣಿ "ಸಬ್‌ಮೆರೀನ್" ಒಂದನ್ನು ಅಖಿಲ ಮೈಸೂರು ಕಾಂಗ್ರೆಸ್ ನಾಲ್ಕನೇ ಮಹಾಧಿವೇಶನದ ನೆನಪಿಗಾಗಿ ಮೈಸೂರು ಸಂಸ್ಥಾನವೆಂಬ ಮಹಾ ಕಡಲಿನಲ್ಲಿ ನಿರ್ಭಯವಾಗಿ ಸಂಚರಿಸುತ್ತ "ಜಾಗೃತಿ" ಯೆಂಬ ಅಮೃತವನ್ನು ಸರ್ವಮತೀಯ

**ಜಂಗಮ ಹೃದಯಾಂತರಂಗ**



ಶ್ರೀಯುತ ಹೆಚ್. ಸಿದ್ದಯ್ಯನವರು, ಮೈಸೂರು ಸ್ಟೇಟ್ (ಶಿವಮೊಗ್ಗ)
ಕಾಂಗ್ರೆಸ್ ಪ್ರಕೃತ ಅಧ್ಯಕ್ಷ ಮಹಾಶಯರು.

ರಿಗೂ, ನಿರ್ವಂಚನೆಯಾಗಿ ಹಂಚುವುದಲ್ಲದೆ, ಪ್ರಜೆಗಳು ಆಜನ್ಮಸಿದ್ಧವಾದ ಹಕ್ಕುಗಳಿಂದ ಕೂಡಿರುವ (ಜವಾಬ್ದಾರಿ ಸರ್ಕಾರ) ವನ್ನು ಶ್ರೀಮನ್ಮಹಾರಾಜರವರ ಕೃಪಾಶ್ರಯದಲ್ಲಿ ಶೀಘ್ರದಲ್ಲಿಯೇ ಗಳಿಸಿಕೊಳ್ಳುವ ಅಖಂಡ ಚೈತನ್ಯವನು, ಸಂಪಾದಿಸಿಕೊಳ್ಳಲೆಂಬ ಆಕಾಂಕ್ಷೆಯಿಂದ ಅಹಿಂಸೆ, ಶಾಂತಿ ಮತ್ತು ಸತ್ಯಾಧಾರರೆನಿಸಿ ಸ್ವಾರ್ಥತ್ಯಾಗಿಗಳಾದ ಸಮಗ್ರ ಕರ್ಣಾಟಕ ಸ್ವಾತಂತ್ರ್ಯ ನಾವಿಕರ ಅಮೃತ ಹಸ್ತದಲ್ಲಿ ಅನನ್ಯ ಭಕ್ತಿಯಿಂದ ಸಮರ್ಪಿಸಿ ಕೃತಾರ್ಥನಾಗಿರುವೆನು.

**ಎನ್. ವಿಷಕಂಠರಾವ್**, ಲಾವಣಿಕಾರ್; ಮೈಸೂರು.

ಪುಲಿಕೇಶಿಯು ಶ್ರೀವೀರವಿಕ್ರಮರು ನೆತ್ತರುಸುರಿಸಿದ ರಾಜ್ಯದಲಿ |
ಸಾಲದ ಶೂಲದ ಕೋಲಾಹಲವಾಯ್ತು ಸತ್ಯಪ್ರಿಯರಕುಶಲತೆಲಿ ||

|| ಚಿಕ್ಕುಡಾರ್ ||

ಗುಣಭೂಷಣವಿದ್ಯಾರಣ್ಯರಿದ್ದ ಬೀಡಿನಲಿ |
ಗುಣಧರ್ಮಪಲಾಯನ ದುರ್ಗುಣಿಗಳನೆಳಲಿನಲಿ ||
ರಣಧೀರಬುಕ್ಕಹರಿಹರರ ಗಂಡುಭೂಮಿಯಲಿ |
ರಣಹೇಡಿತನವು ಆವರಿಸಿತಾತ್ಮದ್ರೋಹದಲಿ ||

|| ಗುಲ್ಲುಡಾರ್ ||

ರನ್ನ ಲಕ್ಷ್ಮೀಶರ ಸೀಮೆಯಲಿ |
ಪೊನ್ನ ಪಂಪರಾನಿವಾಸದಲಿ ||
ಜನ್ನ ಬಿಲ್ಹಣರ ಪ್ರದೇಶದಲಿ |
ತನ್ನ ನಿಜವ ತಾನರಿಯದಂತಾಯಿತು ಅನ್ಯರಬಲುಮೆಯಲಿ ||

|| ಶ್ಲೋಕ ||

ಹಳೆಯಸವಿನೆನಪುಸುರಬೇಕೆಂತೆಂದರಿನ್ನೂ ಬಹಳಿದೆ |
ವೇಳೆನಿಯಮವು ಕಳೆವುದೆನ್ನುತ ಇದನುಇಷ್ಟಕೆನಿಲಿಸಿದೆ ||

|| ಚಾಲ್ ||

ಮುಂದಕೆ ಮೈಸೂರ್ ಇಂದಿನ ಆಳ್ವಿಕೆ ಒಂದೊಂದಂಶವ ವಿವರಿಪೆನು |
ಹಿಂದೂ-ಮುಸಲ್ಮಾನ್ ಬಂಧುಭಗಿನಿಯರಿಗೊಂದಿಸಿಪೇಳುವೆ ಸಭೆಲಿದನು ||


|| ೧ ||

ಮೈಸೂರ್‌ದೇಶದಿ ಹೆಸರಿಗೆಹದಿನಾರ್ ಸಾವಿರಹಳ್ಳಿಗಳಿರುತಿಹುದು |
ಹಸುತೃಷೆಯಿಂದಲಿ ನರಳುವಪ್ರಜೆಗಳು ಎಪ್ಪತ್ತುಲಕ್ಷಕೆ ಮೀರಿಹುದು ||
ದೇಶದಹಿತಕೇ ಪ್ರತಿಸಂವತ್ಸರ ರೈತರುತೆರಿಗೆಯ ಕೊಡುತಿಹುದು |
ಅಸಲ್‌ಲೆಖ್ಖವಿದು ಸುಮಾರು ನಾಲಕ್ಕುಕೋಟಿ ರೂಪಾಯಿಗಳಾಗುವುದು ||
ಈ ಸಮಯದಿ ಒಂದದ್ಭುತವಾರ್ತೆಯ ಬಂಧುಭಗಿನಿಯರುಲಾಲಿಪುದು |
ಮುಸಲತ್‌ಕಾರ್ಯದಿ ಕಾತುರಗೊಳ್ಳುವ ಮಾದರಿಸರ್ಕಾರ್ ಒಂಧಿಹುದು ||

## ಕೃತಜ್ಞತೆ

**ಮೈಸೂರು ಕಾಂಗ್ರೆಸ್ ಇತಿಹಾಸ** ಎಂಬ ನಾಮಾಂಕಿತ ಮಗುವು ಮಗುಗಳ ಮಾಣಿಕ್ಯವಾಗಿ ಹೊರಬೀಳುವಂತೆ ಸಹಾಯ ಮಾಡಿದ ಮೈಸೂರು ಕಾಂಗ್ರೆಸ್ ಪ್ರಧಾನ ಕಛೇರಿಯ ಪ್ರಧಾನಾಧಿಕಾರಿಗಳಿಗೂ, ಮೈಸೂರು ಪೌರಸಭಾ ಕಾಂಗ್ರೆಸ್ ಸದಸ್ಯರಾಗಿರುವ ಶ್ರೀ ಎಂ. ಆರ್ ಸಿ. ಬಸಪ್ಪ, ಶ್ರೀ ಸಿ. ವೆಂಕಟರಮಣಯ್ಯ, ಶ್ರೀ ಜಿ. ಜನಾರ್ಧನನಾಯಿಡುಯವರಿಗೂ ಮತ್ತು ಕಾಂಗ್ರೆಸ್ ಕೆಲಸಗಾರರಾದ ಶ್ರೀ ಬಾಳೆಹಣ್ಣು ಅಂಗಡಿ ಶಿವಣ್ಣನವರಿಗೂ ನನ್ನ ವಂದನೆಗಳನ್ನರ್ಪಿಸುವುದಲ್ಲದೆ, ಈ

**ರಾಜಕೀಯ ದುರಂಧರ** | **ಶಾಂತಿ ಸಾಗರ**



ಶ್ರೀಜುತ್ ಕೆ. ಟಿ. ಭಾಷ್ಯಂ ಅಯ್ಯಂಗಾರ್,
ಸ್ಟೇಟ್ ಕಾಂಗ್ರೆಸ್ ಮಾಜಿ ಅಧ್ಯಕ್ಷರು.



ಶ್ರೀಮಾನ್ ಎಚ್. ಸಿ. ದಾಸಪ್ಪ,
ಕಾಂಗ್ರೆಸ್ ಮಾಜಿ ಅಧ್ಯಕ್ಷರು.

ಪುಸ್ತಕಕ್ಕೆ ಅಲಂಕಾರಯುತ ಭಾವಚಿತ್ರಗಳನ್ನು ಒದಗಿಸಿಕೊಟ್ಟಂತ ಶ್ರೀ ಗುಡಿಬಂಡೆ ರಾಮರಾಯರಿಗೂ, ಮತ್ತು ಈ ಲಾವಣಿ ಪುಸ್ತಕವು ಸಕಾಲಕ್ಕೆ ಸರ್ವಾಂಗಸುಂದರವಾಗಿ ಹೊರಬೀಳುವಂತೆ ಮುದ್ರಿಸಿಕೊಟ್ಟ ಶ್ರೀ ನೀಲಕಂಠೇಶ್ವರ ಪ್ರಿಂಟಿಂಗ್ ವರ್ಕ್ಸ್ ಮಾಲೀಕರಾದ ಶ್ರೀ ಹೆಚ್. ಎಸ್. ಶೇಷಗಿರಿರಾಯರಿಗೂ ಕೃತಜ್ಞತಾಪೂರ್ವಕ ನನ್ನ ಧನ್ಯವಾದಗಳರ್ಪಣೆಯೊಂದಿಗೆ ಚಿರಋಣಿಯಾಗಿರುವೆನು.

**ಎ. ವಿಷಕಂಠರಾವ್**, ಲಾವಣಿಕಾರ್, ಮೈಸೂರು.

|| ಚಾಲುದರ್ಾ ||

ಈ ಸರಕಾರವೆ ಘನಸರಕಾರವು ರಾಜ್ಯಸೂತ್ರಗಳಪಿಡಿದಿಹುದು |
ಶಾಸನಬಲದೊಳು ನಿಸ್ಪೃಹತಿಂದಲಿ ನಮ್ಮದೇಶವನು ಆಳುವುದು ||
ಆಸುರಿಪಥದೊಳು ಹಗಲಿರುಳೆನ್ನದೆ ನಮಗೋಸುಗಶ್ರಮಪಡುತಿಹುದು |
ಆಸೆದುರಾಸೆಯ ತ್ಯಜಿಸುತಸಂಬಳ ಸಾವಿರಗಟ್ಟಲೆ ಪಡೆಯುವುದು ||

|| ಶ್ಲೋಕ ||

ರೈತರ್ಧಣಕ್ಕೈಗೊಂಡುದರ್ಪದಿ ಮದ್ದುಗುಂಡಿನಬಲದಲಿ |
ಭೂತಪ್ರೇತಗಳಾತ್ಮತೃಪ್ತಿಗೆ ವೆಚ್ಚವಮಾಡುವದರ್ತಿಲಿ ||

|| ದೊಡ್ಡುದರ್ಾ ||

ಪಾರ್ಕುಗಳಂದವ ವರ್ಣಿಸಲರಿಯೆನು ಮರಗಿಡಬಳ್ಳಿಗಳಿಂದಿಹುದು |
ಸರ್ಕಲ್‍ರಸ್ತೆಗಳಂದವ ಅರುಹಲು ಆದಿಶೇಷನಿಗುಗೊತ್ತಿರದು ||
ಮುರ್ಕಲ್‍ಮನೆಗಳ ಪರ್ಕಲ್‍ಜನರಿಗೆ ಸರ್ಕಲ್‍ಪಾರ್ಕಿಂದೇನಿಹುದು |
ಮರ್ಕಟಶಾಸ್ತ್ರಿಯು ಮಾರ್ಜಾಲಋಷಿಗಳ ನ್ಯಾಯತೀರಿಸಿದತೆರವಿಹುದು ||

|| ಚಿಕ್ಕದಾನ್ ||

ಮಿರುಮಿರುಗುವ ಸರ್ಚ್‍ಲೈಟ್‍ಡೂಮುಲೈಟುಗಳಮೆಚ್ಚಿ |
ನೂರಾರು ಲಕ್ಷ ರೂಪಾಯಿ ದೀಪಗಳ ಹಚ್ಚಿ ||
ಬರಿಪೌರುಷ ಸಿಂಹರತೆರದಿ ಮಾತುಗಳ ಕೊಚ್ಚಿ |
ಧರೆಯೊಳಗೆಮಾದರಿಯನಾಡಿದೆನ್ನದ್‍ಮನಬಿಚ್ಚಿ ||

|| ಗುಲ್ಲುದರ್ಾ ||

ನಮ್ಮ ಸರಕಾರದಪದರಚಿಸಿ |
ನಿಮ್ಮಮುಂದಿಷ್ಟುಮಾತ್ರ ತಿಳಿಸಿ ||
ನಮ್ಮವರಜಾಗೃತಿಗನುಗೊಳಿಸಿ |
ನಮ್ಮನಾಡಿನೊಳು ಪರರಿಂದಾಗುವ ದಾಳಿಯದೂರಿರಿಸಿ ||

|| ಶ್ಲೋಕ ||

ಎಂದುಹೇಳುವ ಮುನ್ನ ಇಂದಿನ ಪೂರ್ಣಸ್ಥಿತಿಯನು ಪೇಳ್ವೆವು |
ಮುಂದೆಯೋಚಿಸಿ ಸುಳ್ಳೋನಿಜವೋ ನ್ಯಾಯದ್ರಿಷ್ಟಿಲಿ ತಿಳಿಪೆವು ||

**ಲಾವಣಿ** ಎಂದರೆ:—ಧರಾಮಂಡಲದಲ್ಲಿ ಸಾಹಿತ್ಯ ಬೀಜದಿಂದ ಲಾವಣಿ ಕಲ್ಪವೃಕ್ಷವು ಯತಿ, ಎಂಬ ರೆಂಬೆಗಳಿಂದಲೂ, ಗಣ, ಎಂಬ ಎಲೆಗಳಿಂದಲೂ, ಪ್ರಾಸು ಎಂಬ ಪುಷ್ಪಗಳಿಂದಲೂ, ಛಂದಸ್ ಎಂಬ ಕಾಯಿಗಳಿಂದಲೂ, ಮೂರ್ತಿವತ್ತಾಗಿ ಕಂಗೊಳಿಸುತ್ತ ಪಾರತಂತ್ರ್ಯದಳ್ಳುರಿಯಲ್ಲಿ ಸಿಲುಕಿ, ಬೆಂದು ಬೂದಿಯಾಗುತ್ತಿರುವ

**ಶರಣಾದರ ವಂಶಭೂಷ.**



ಶ್ರೀಯುತ ನಿಜಲಿಂಗಪ್ಪನವರು,
ಚಿತ್ರದುರ್ಗ.

**ಸತ್ವಗುಣ ಪ್ರಧಾನ**



ಶ್ರೀಜುತ್ ಸುಬ್ರಹ್ಮಣ್ಯಂರವರು,
ತುಮಕೂರು.

ಸ್ವಾತಂತ್ರ್ಯಪ್ರಿಯ ಪ್ರಜೆಗಳಿಗೆ, ಅಮೃತಸೇಚನಪ್ರಾಯವಾಗಿರುವ ಜ್ಞಾನವೆಂಬ ಮಧುರ ಫಲಗಳನ್ನು ನೀಡಿ, ಮನದಣಿಯುವಂತೆ ಮಾಡಿರುವುದಲ್ಲದೆ, ಸ್ವಾತಂತ್ರ್ಯ ಸಮರದಲ್ಲಿ ಜಯಲಾಭವನ್ನು ಪಡೆಯುವಂಥ ನವಚೈತನ್ಯವನ್ನು ಉಂಟು ಮಾಡುವ ಶೃತಿ, ಸ್ಮೃತಿ, ಶಾಸ್ತ್ರಾಧಾರಯುಕ್ತವಾದ ಅಹಿಂಸಾಸ್ತ್ರವಾಗಿದೆ.

ತುರಾಬಿರುದಾರ್, ಬಿ. ನೀಲಕಂಠಯ್ಯ
ಲಾವಣಿ ವಿದ್ವಾನ್, ಬೆಂಗಳೂರು ಸಿಟಿ.

|| ಚಾಲ್ ||

ಇಂದಿನಸರ್ಕಾರ್ ಮಂದಭಾಗ್ಯತೆಗೆ ಏನೆಂದು ಸುರಲಿ ಸಭೆಲಿದನು ।
ಹಿಂದೂ-ಮುಸಲ್ಮಾನ್ ಬಂಧುಭಗಿನಿಯರಿಗೊಂದಿಸಿಪೇಳುವೆ ವಿಷಯವನು ॥

|| ೨ ||

ಹಿಂದೂಸನಾತನ ಧರ್ಮಕೆತೌರ್ಮನೆಯೆಂದೆನಿಸಿದ ನಮ್ಮರಾಮರಾಜ್ಯ ।
ಒಂದನೆನಂಬರ್ ಸೇಂದಿಷರಾಬಿನ ಮಂದಿರವೆನಿಸಿದೆ ಸಾಮ್ರಾಜ್ಯ ॥
ಬಂದಕಷ್ಟಗಳಿಗೊಂದಕುಬೆದರದೆ ಮುಂದಕೆಬಂದಿದ್ದ ರಾಮರಾಜ್ಯ ॥
ಕಂದಾಯದ ಹೊರೆಯಿಂದಲಿಬಳಲುತ ತೊಂದರೆಪಡುತಿದೆ ಸಾಮ್ರಾಜ್ಯ ॥
ಬಂಧುರವಾದಿಗಳೊಂದಿಗೆಸೇರುತ ಕುಂದುಗಳ್ಹರಿಸಿದ ರಾಮರಾಜ್ಯ ।
ತಂದೆಯೆಮಕ್ಕಳ ಚಂದದಿಸಲಹಲು ಹಿಂದೆಗೆಯುತ್ತಿದೆ ಸಾಮ್ರಾಜ್ಯ ॥

|| ಚಾಲುಡಾ್ ||

ಆರುಶಾಸ್ತ್ರ ಹದಿನೆಂಟುಪುರಾಣವ ರಚಿಸಿದಪ್ರಾಜ್ಞರಕರುನಾಡು ।
ನೂರಕೆತೊಂಭತ್ತುಜನಹೆಬ್ಬೆಟ್ಟನು ಒತ್ತುವಂತಾಯಿತುನಮ್ಮನಾಡು ॥
ದಾರಿಗರಿಗೆಶ್ರಮಪರಿಹರವಾಗಲು ಕ್ಷೀರೋದಕನೀಡಿದನಾಡು ।
ನೀರಿನಭಾವದ ಆಹಾಕಾರದಿ ಬಳಲುವಂತಾಯಿತುನದಿಬೀಡು ॥

|| ಶ್ಲೋಕ ||

ಆಯುರ್ವೇದಾಶ್ರಮಗಳೆನಿಸಿದ ಗ್ರಾಮಗಳಲಿಹಮನುಜರು ।
ಸಾಯುವಾಗಲು ವೈದ್ಯಶಾಲೆಸಹಾಯವಿಲ್ಲದೆಸಾಯ್ವರು ॥

|| ದೊಡ್ಡ ಡಾ್ ||

ಮನೆಯದೇವರು ಮಣ್ಣುಮುಕ್ಕುವಾಗ ತಬ್ಬಲಿದೇವರಿಗೆ ತಂಬಿಟ್ಟು ।
ಅನುಭವರಹಿತರು ಅಳುವಅಸೆಂಬ್ಲಿಲಿ ಮಾತಿಗೆಮೊದಲೇಉಪ್ಪಿಟ್ಟು ॥
ಖೂನಿಕೋರರಿಗೆ ದುರ್ವರ್ತನೆಗಾ ಸೆರೆಮನೆಲವರಿಗೆಒಬ್ಬಿಟ್ಟು ।
ತನುಮನಧನಗಳ ದೇಶಕೆನೀಡಿದ ಕಾಂಗ್ರೆಸ್ ಜನರಿಗೆ ಪಡಿಹಿಟ್ಟು ॥

|| ಚಿಕ್ಕ ಡಾ್ ||

ಮನುಜರಿಗೆ ಪರಮಸರಕಾರದೈವವೆಂದೆಂದು ।
ತನುವೆತ್ತಿಹಪ್ರಜೆಗಳೆ ತಮಗೆದೈವನಿಜವೆಂದು ॥

ಚಿಂತಾಧ್ವಾಂತ ಪತಂಗ



ಶ್ರೀಜುತ್ ಟಿ. ರಾಮಾಚಾರ್, ಕೋಲಾರ.

---


ಸಾಹುಕಾರ್ ಡಿ. ಪುಟ್ಟಯ್ಯ, ಮರ್ಚೆಂಟ್ಸ್

ದೇವರಾಜ ಮಾರ್ಕೆಟ್, ಮೈಸೂರು ಸಿಟಿ.

ಸಮಗ್ರ ಕರ್ಣಾಟಕದಲ್ಲಿ ಅಖಂಡವಾಗಿ ಖರ್ಚಾಗುವ **ಲಿಲ್ಲೀ ಬ್ರಾಂಡ್ ಕಾಫೀಪುಡಿ** ಆಸ್ವಾದವು ಜನಜೀವನದಲ್ಲಿ ರಕ್ತವಾಗಿದೆಯೆಂದರೆ ತಪ್ಪಾಗಲಾರದು.

ಎಂ. ಆರ್. ಸಿ. **ಬಸಪ್ಪ**, ಜ್ಯೂಬಿಲಿ ಸ್ಟೋರ್ಸ್

ಕಾಂಗ್ರೆಸ್ ಬೀಡಿ ಡಿಪೋ, ಪ್ರೊಪ್ರೈಟರ್,

ಮೈಸೂರು ಸಿಟಿ,


---

ಅಕಳಂಕ ಹೃದಯ



ಶ್ರೀಮಾನ್ ಹೆಂಜಾರಪ್ಪನವರು, ಮಧುಗಿರಿ.

ಮನುಮಾರ್ಗವರಿತ ಯಿಾಗಿರುವಸರ್ಕಾರವುಬಂದು |
ಮನ ವಚನ ಕಾಯದಲಿ ನೀತಿಬಿಡಲುಜನರಿಂದು ||

|| ಗುಲ್ಲುಡಾ ||

ಅಷ್ಟವಿಧಕರ್ಮಗೆಲಿದುಯಿರುವ |
ಶಿಷ್ಟರೊಳುಜ್ಞಾನಚತುಷ್ಟಯುವ ||
ನಿಷ್ಠೆಯಿಂದಾರ್ಜಿಸಿರಂಜಿಸುವ ||
ಶ್ರೇಷ್ಠವಾದನಮ್ ಕಾಂಗ್ರೆಸ್‌ಸಂಸ್ಥೆಯ ಸ್ಥಾಪಿಸಿಪ್ರಕಟಿಸುವ ||

|| ಶ್ಲೋಕ ||

ಅಸಮಸಾಹಸಕಾರ್ಯವನು ಕೈಗೊಂಡರಾಕ್ಷಣದೇಶದಿ |
ಭಾಸುರಾಂಗಮಹಾತ್ಮಗಾಂಧಿಯ ಶಾಂತಿಸತ್ಯಾಧಾರದಿ ||

|| ಚಾಲ್ ||

ಬಂದನುಬೊಂಬಾಯ್ ಕಾಂಗ್ರೆಸ್‌ನರಿಮನ್ ದೂರದರ್ಶಿ ನಿಜವಿಕ್ರಮನು |
ಹಿಂದುಮುಂದರಿಯದ ನಮ್‌ಸರಕಾರವು ಬಂಧನಗೊಳಿಸಿತು ಅವರನ್ನು ||

|| ೩ ||

ಜವಾಬ್ದಾರಿಸರಕಾರಬೇಕೆನ್ನುವ ಕೂಗಿನೊಳುದಿಸಿತುಹೋರಾಟ |
ಕಿವಿಕಣ್ಣಿಲ್ಲದ ಕರ್ತವ್ಯಮೂಢರಿಗಾಯಿತು ತಕ್ಷಣಪರದಾಟ ||
ಶಿವಪುರಕಾಂಗ್ರೆಸ್ ಮೊದಲಧಿವೇಶನಸಮಯಕೆ ಅದ್ಭುತಜಂಝಾಟ |
ಭಾವಭೇದಕಾರ್ಪಣ್ಯಯುತರ ಬಹುಕೃತ್ರಿಮಕಾರ್ಯದ ಓಡಾಟ ||
ತ್ರಿವರ್ಣಧ್ವಜನಮ್ ರಾಷ್ಟ್ರಧ್ವಜದಡಿ ಹಗಲಿರುಳೆನ್ನದೆ ಕಾದಾಟ |
ಗಾವಿಲವಿಂಥರ ಹುಸಿಬಡಿದಾಟದಿ ಬಂಧನಕಾರ್ಯವು ಹೊಲಸಾಟ ||

|| ಚಾಲುಡಾ ||

ಜೀವದಬೆಲೆಯನು ತಿಳಿಯದಕೆಲವರ ಕುತಂತ್ರಮಂತ್ರದ ದೌಲತ್ತು |
ಕಾವಳದಬರ್ಾರ್ ಗುಂಡನುಹೊಡೆಸಲು ಪಿದುರಾಶ್ವತ್ಥದಿ ಮೂವತ್ತು ||
ಜೀವಹೋದ ಮೇಣ್ ಜೀವಶ್ರವಗಳ ಆರ್ತನಿನಾದದ ಕಿಮ್ಮತ್ತು |
ಆವಿರ್ಭವಿಸಲು ಪ್ರಪಂಚವೆಲ್ಲಕು ಅನೀತಿ ಸರ್ಕಾರವು ಮತ್ತು ||

ವನಿತಾ ಸೌಭಾಗ್ಯಶರಧಿ



ಮಾತೃಶ್ರೀ ಬಳ್ಳಾರಿ ಸಿದ್ದಮ್ಮನವರು,


# ದೇವರಾಜ ಪರಿಮಳ ವರ್ಕ್ಸ್

ತುಮಕೂರು (ಮೈಸೂರು ದೇಶ)

Trade **D R M** Mark

ಶ್ರೀಯುತ ಡಿ. ಆರ್. ಮುದ್ದಪ್ಪನವರ ಪ್ರಸಿದ್ಧ ಸುಗಂಧ ದ್ರವ್ಯಗಳೆನಿಸಿದ ಸರ್ದಾರ್ ಜವಾಜಿಬತ್ತಿ, ಡಿ. ಆರ್. ಎಂ. ದರ್ಬಾರ್‌ಬತ್ತಿ ಪರಿಮಳದಶಾಂಗ, ನಿತ್ಯಾನಂದ ಟೂತ್ ಪೌಡರ್, ಮೊದಲಾದವುಗಳು ಅಖಂಡ ಕರ್ಣಾಟಕದ ಸರ್ವಜನಾಂಗದವರ ಮಂಗಳ ಕಾರ್ಯಗಳಿಗೆ ಕಲ್ಪವೃಕ್ಷದಂತಿರುವುದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

**ಎಂ. ವಿಷಕಂಠರಾವ್**

ಲಾವಣಿಕಾರ್, ಮೈಸೂರು ಸಿಟಿ.

|| ಶ್ಲೋಕ ||

ಕುಟಿಲನೀತಿಯ ಮಠದಿಮದ್ರಾಸ್ ರಮೇಶಂಸಮಿತಿಯ ನೇಮಿಸಿ |
ದಿಟವ ಮರೆಸಿದರಕಟ ವಿಕಟರು ಸಟೆಯ ದಿಟವೆಂದೆನ್ನಿಸಿ ||

|| ದೊಡ್ಡುಡಾನ್ ||

ಸುಧಾರ್ಣಸಮಿತಿಯು ತದೇಕಚಿತ್ತದಿ ಅದೇಕಾಲದಲಿನಿರ್ಮಿಸಲು |
ಹದಿನಾಲ್ಕುತಿಂಗಳು ಗರ್ಭವಧರಿಸಿದ ಸುಧಾರಣಾ ಸ್ತ್ರೀ ಗೆಲುವಿನೊಳು ||
ತುದಿಮೊದಲಿಲ್ಲದ ಗಂಡುಹೆಣ್ಣುಯರಡಲ್ಲದ ಶಿಶುವನುಪ್ರಸವಿಸಲು |
ನಿದಾನದ್ರೋಹಿಗಳೆಲ್ಲೆಡೆ ಸ್ವಾಗತಬಯಸಿ ಉಘೇಯೆಂದೆನುತಿರಲು ||

|| ಚಿಕ್ಕುಡಾರ್ ||

ಎಲ್ಲೆಲ್ಲು ಪ್ರಚಾರದ ಕಾರ್ಯಕ್ಕಾಗಿ "ಪ್ರೆಸಿಡೆಂಟ್"ರು |
ಜಿಲ್ಲೆಎರಡನುಬಳಸೀ ತೃತೀಯಜಿಲ್ಲೆ ತಲಪಿದರು ||
ಬಲ್ಲಂತವುಖಂಡರು ವರ್ಕಿಂಗ್‌ಕಮಿಟೆಯವರಿದ್ದರು |
ಅಲ್ಲಿಂದಹಾಗೆಯೇ ಚಿನ್ನದ್ಗಣಿಯಸೇರಿದರು ||

|| ಗುಲ್ಲುಡಾನ್ ||

ಆಯ್ತುಅಲ್ಲಾಯ್ತು ದಸ್ತಗಿರಿಯು |
ಆಯ್ತುಮೊದಲಾಯಿತು ಚಳವಳಿಯು ||
ಹೋಯ್ತುತುಂಬೋಯಿತು ಸೆರೆಮನೆಯು |
ಸಾಯ್ತುಸರ್ಕಾರದ ಕಾನೂನ್‌ಕಂತೆಯು ಅಡಗಿಗರ್ವಗಿರಿಯು ||

|| ಶ್ಲೋಕ ||

ಅಸಹಕಾರದ ಹೊಡೆತ ತಡಿಯದೆ ನಮ್ಮ ಘನ ಸರಕಾರವು |
ಮೋಸಹೋದೆವುಯೆನುತ ಗಾಂಧಿಗೆಹೇಳಿಕೊಂಡಿತು ಸತ್ಯವು ||

|| ಚಾಲ್ ||

ಗಾಂಧಿಮಹಾತ್ಮರು ಒಂದಾಲೋಚನೆಯಿಂದಲಿ ಸತ್ಯಾಗ್ರಹವನ್ನು |
ಇಂದೇ ನಿಲ್ಲಿಸಿಯೆಂದಅಪ್ಪಣೆಯ ಪಾಲಿಸುತಿರುವೆವು ನಾವಿನ್ನು ||




ನವಚೈತನ್ಯಕ್ಕೆ----ಮತ್ತು----ಬುದ್ಧಿಶಕ್ತಿಗೆ

REGISTERED TRADE MARK

# ಲಿಲ್ಲೀ ಬ್ರಾಂಡ್ ಕಾಫಿ

## ಪುಡಿಯನ್ನೇ ಉಪಯೋಗಿಸಿ

ಡಿ. ಪುಟ್ಟಯ್ಯ,

ಸಕ್ಕರ ಮಂಡಿ, ಸಂತೇಪೇಟೆ,

ಬ್ರಾಂಚ್:- ದೇವರಾಜ ಮಾರ್ಕೆಟ್,

ಮೈಸೂರು.

|| ೪ ||

ನಿರುಪಮಃಕಾಂಗ್ರೆಸ್ ವಕೀಲ್‌ಮುಖಂಡರು ಸನದ್‌ಕಳೆದುಕೊಂಡ ಸುಗುಣಿಗಳು |
ಸ್ವರಾಜ್ಯವಾದಿಗಳರಸರು ಭಾಷ್ಯಂ ಪಟ್ಟಾಭಿರಾಮಯ್ಯರವರುಗಳು ||
ಭಾರತಾತ್ಮಪ್ರಭೆ ಸ್ಫುರಿಸುವಂತೆಸೆಗಿದ ರಾಮಾಚಾರ್ಯರ ಕಾರ್ಯಗಳು |
ನಿರಪರಾಧಿತ್ವವ ಸ್ಥಾಪಿಸಲೊಪ್ಪದ ಸಂಪಂಗಿರಾಮಯ್ಯನವರುಗಳು ||
ಪುರುಷೋಚಿತ ಸತ್ಕರ್ಮಧುರಂಧರ ಟಿ.ಸುಬ್ರಹ್ಮಣ್ಯಂ ಮೇಲ್ಮೈಗಳು |
ದಾರುಣವಾದ ವಿಪತ್ತಿಗೆಬೆದರದ ಹೆಂಜಾರಪ್ಪಸುಧರ್ಮಿಗಳು ||

|| ಚಾಲುಡಾರ್ ||

ಸ್ವರಾಜ್ಯಸ್ಥಾಪನೆ ವ್ರತಕ್ಕೈಗೊಂಡಿಹ ಗೋವಿಂದರೆಡ್ಡಿ ಪ್ರಯೋಗಗಳು |
ಪರದೇಶಸ್ಥನ ದುಷ್ಟಮತ್ತತೆಗೆ ಸಿಲುಕಿದ ದಾಸಪ್ಪನವರುಗಳು ||
ಮೆರೆವೀಮೈಸೂರ್ ಕಾಂಗ್ರೆಸ್‌ವೈಸಿರಿ ರಂಗರಾಮಯ್ಯಪ್ರಬೋಧಗಳು |
ಸ್ಥಿರವಾಗಿರಲಾಚಂದ್ರಾರ್ಕಾಂಬರ ಶಾಶ್ವತ ಬೆಳುಗೊಡೆ ನೆಳಲುಗಳು ||

|| ಶ್ಲೋಕ ||

ಸೆರೆಯವಾಸದಿ ತರಳಪ್ರಹ್ಲಾದ್ ಶ್ರೇಷ್ಠಿಮೇಣ್ ಉಗ್ರಪ್ಪನು |
ಮರಣದೇವಿಯ ಗೃಹವಸೇರಿದ ವೀರಹನುಮಂತಪ್ಪನು ||

|| ದೊಡ್ಡಡಾರ್ ||

ಮೈಸೂರ್‌ಕಾಂಗ್ರೆಸ್ ಕಂಠಾಭರಣರು ಸಿದ್ದಮ್ಮಗಂಗಮ್ಮನವರುಗಳು |
ಅಸಹಕಾರಸಿದ್ಧಾಂತಪ್ರವೀಣರು ಸತ್ಯಾಗ್ರಹಿಗಳ ತಂಡಗಳು ||
ದೇಶಹಿತಾರ್ಪಿತ ಪ್ರಾಣಪದಕನಿಜಲಿಂಗಪ್ಪ, ಸಿದ್ಧಯ್ಯನವರುಗಳು |
ದಾಸತ್ವದ ಮಿಗೆ ಲಾಂಛನವಳಿಸುವ ಸತ್ಯ ಅಹಿಂಸಾವಾದಿಗಳು||

|| ಚಿಕ್ಕಡಾರ್ ||

ಸರಿಸಮಾನಧರ್ಮದ ಮಾರ್ಗತಿಳುಹಿಜಗಕೆಲ್ಲಾ |
ಸರಕಾರದಶಾಸನಮುರಿದು ಸೇರ್ದರ್‌ಸೆರೆಗೆಲ್ಲಾ ||
ಕರುಣಾಕರ ಶ್ರೀ ಜಯಚಾಮರಾಜ ಕೃಪೆಲೆಲ್ಲಾ |
ಚಿರಸುಖಾಭಿಕಾಂಕ್ಷೆ ಸ್ವರಾಜ್ಯಪಡೆದರನುವೆಲ್ಲಾ ||

|| ಗುಲ್ಲುಡಾ ||

ದೇಶಹಿತಕಾರ್ಯಬೆಳೆಯುತಿರಲಿ |
ದೋಷದುರ್ಭಾವದೂರವಿರಲಿ ||
ಶಾಸಕರನಗ್ನ ಹೃದಯುಮರಳಿ ||
ಸೋಸಿದ ಅಮೃತ ಸ್ನೇಹಪುರಸ್ಸರ ವರ್ತನೆಯೊಳಗಿರಲಿ ||

|| ಶ್ಲೋಕ ||

ಬೆಳೆದುಬಂದಸ್ವರಾಜ್ಯವಾದವು ಬೆಳಗಿಮುಂದಕೆಬಾಳಲಿ |
ಇಳೆಗೆಜ್ಞಾನದ ಬೆಳಕತೋರಲಿ ತುರಾಬ್ರಹ್ಮನ ಕೃಪೆಯಲಿ ||

|| ಚಾಲ್ ||

ವಂದೇಮಾತರಂ ಮಂತ್ರವಪಠಿಸಿದ ಪುಟ್ಟನಂಜಣ್ಣರ ಪದವಿದನು |
ಹಿಂದಿನಪದವಿಯ ಇಂದೇಪಡೆಯಿರಿ ಯೆಂದುಸಾರಿದೆನು ಸಭೆಲಿದನು ||


## ಧನ್ವಂತರಿ ಚಿಕಿತ್ಸಾಲಯ

(ಬ್ರಾಂಚ್) ಅವೆನ್ಯೂರೋಡ್, ಬೆಂಗಳೂರು ಸಿಟಿ.

ಕರ್ಣಾಟಕ ಲಾವಣಿ ಸಾಹಿತ್ಯ ಸಂಘದ ಅಧ್ಯಕ್ಷ ಮಹಾಶಯ [ಪೌರಸಭಾ ಮಾಜಿ ಸದಸ್ಯರು] ವೈದ್ಯರಾಜ್ ಡಿ. ರಾಮೇಶ್ವರಸಾರವರ

(ಶಾಂತಿಕಲ್ಯಾಣಿತೈಲ) (ರಿಜಿಸ್ಟರ್ಡ್)

ವಿದ್ಯಾರ್ಥಿಗಳಿಗೂ, ಮೆದಳಿನ ಕೆಲಸಗಾರರಿಗೂ ಕಾಮಧೇನುವಾಗಿರುವುದು.
ಕಾಯಾ ವಾಚಾ ಮನಸಾ ಉತ್ಕೃಷ್ಟವಾದುದೆಂದು ಹೇಳಬಯಸುತ್ತೇನೆ.

**ಕಲ್ಗಿಬಿರುದಾರ್ ಡಿ. ಎಸ್, ರಾಮುಸ್ವಾಮಿ**
ಲಾವಣಿ ವಿದ್ವಾನ್, ಬೆಂಗಳೂರು ಸಿಟಿ.